ಬರಲು ತಯಾರಿಕಾ ಅಥವಾ ಸರಕು ಸಂಸ್ಕರಣಕ್ಕೆ ವರ್ತಕರು ಪಾವತಿಸಲಾಗುವ ತೆರಿಗೆಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 03.06.2009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/2009(ii)**ನೇ ಸಂಖ್ಯೆಯ ಅಧಿಸೂಚನೆ.

3. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಯಾವ ವರ್ತಕರು ಕೈಗಾರಿಕಾ ಘಟಕ ಮತ್ತು ಭಾರತದ ರಾಜ್ಯ ಕ್ಷೇತ್ರದ ಹೊರಗೆ ರಫ್ತು ಮಾಡುವರೋ ಅಂತಹ ಸರಕುಗಳ ಒಟ್ಟು ಬೆಲೆಯಲ್ಲಿ ಶೇಕಡ 25%ರಷ್ಟು ತಯಾರಿಕೆ ಹಾಗೂ ವಿಲೇವಾರಿಯನ್ನು ವಾಣಿಜ್ಯ ಉತ್ಪಾದನೆಯ ಕಚ್ಚಾ ವಸ್ತುಗಳು, ಹೂಡೂವಳಿ ಭಾಗಗಳನ್ನು ಬಳಸುವ ಸ್ಥಾನಿಕ ಸ್ಥಳಗಳಿಗೆ ವರ್ತಕರು ಪಾವತಿಸಲಾಗುವ ತೆರಿಗೆಗೆ ಪರಿಮಿತಿ ಹಾಗೂ ಷರತ್ತುಗಳೊಂದಿಗೆ ಸಾರ್ವಜನಿಕ ಹಿತದೃಷ್ಟಿಯಿಂದ ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತೆರಿಗೆ ವಿನಾಯಿತಿ ನೀಡಿ **ದಿನಾಂಕ 03.06.2009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/3009(iii)**ನೇ ಸಂಖ್ಯೆಯ ಅಧಿಸೂಚನೆ.

4. 1979ರ ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಯಡಿಯಲ್ಲಿ ಅಧಿಸೂಚನೆ ಸಂಖ್ಯೆ ಎಫ್‌ಡಿ/29/ಸಿಇಟಿ/2006(i), ದಿನಾಂಕ 17.01.2007ರಲ್ಲಿ ಹೊರಡಿಸಲಾದ ಅಧಿಸೂಚನೆಯ ಕಲಂ(ಬಿ)ಯ ನಂತರದಲ್ಲಿ ಕೆಲವು ಪದಗಳನ್ನು ದಿನಾಂಕ 01.04.2009ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಿ **ದಿನಾಂಕ 03.06.2009**ರಂದು ಹೊರಡಿಸಲಾದ **ಎಫ್‌ಡಿ/5/ಸಿಇಟಿ/2009(iv)**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

2005ರ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮದ ಕಲಂ 25(5)ರ ಮೇರೆಗೆ

1. 2005ರ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 26.12.2006**ರಂದು ಹೊರಡಿಸಲಾದ **ಡಿಪಿಎಆರ್/11/ಆರ್‌ಟಿಐ/2006**ನೇ ಸಂಖ್ಯೆಯ ಅಧಿಸೂಚನೆ.

2. 2005ರ ಕರ್ನಾಟಕ ಮಾಹಿತಿ ಹಕ್ಕು ಅಧಿನಿಯಮದಡಿ ಕರ್ನಾಟಕ ಮಾಹಿತಿ ಹಕ್ಕು (ಪೀಠಗಳ ರಚನೆ) ನಿಯಮಾವಳಿಗಳು–2006ನ್ನು ರಚಿಸಿ **ದಿನಾಂಕ 29.01.2007**ರಂದು ಹೊರಡಿಸಲಾದ **ಡಿಪಿಎಆರ್/28/ಆರ್‌ಟಿಐ/2006**ನೇ ಸಂಖ್ಯೆಯ ಅಧಿಸೂಚನೆ.

3. 2005ರ ಕರ್ನಾಟಕ ಮಾಹಿತಿ ಹಕ್ಕು ನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 11.07.2007**ರಂದು ಹೊರಡಿಸಲಾದ **ಡಿಪಿಎಆರ್/39/ಆರ್‌ಟಿಐ/2007**ನೇ ಸಂಖ್ಯೆಯ ಅಧಿಸೂಚನೆ.

4. 2005ರ ಕರ್ನಾಟಕ ಮಾಹಿತಿ ಹಕ್ಕು ನಿಯಮಗಳಲ್ಲಿ ನಿಯಮ 14ನ್ನು ಹೊಸದಾಗಿ ಸೇರ್ಪಡೆಗೊಳಿಸಿ **ದಿನಾಂಕ 17.03.2008**ರಂದು ಹೊರಡಿಸಲಾದ **ಡಿಪಿಎಆರ್/14/ಆರ್‌ಟಿಐ/2008**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ ಕಲಂ 8(3)ರ ಮೇರೆಗೆ:

1. 1997ರ ಕರ್ನಾಟಕ ಗೆಜೆಟೆಡ್ ಪ್ರೊಬೇಷನರುಗಳ ನೇಮಕಾತಿ(ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ನೇಮಕ) ನಿಯಮಗಳ ನಿಯಮ 5ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 11.03.2009**ರಂದು ಹೊರಡಿಸಲಾದ **ಡಿಪಿಎಆರ್/49/ಎಸ್‌ಆರ್‌ಆರ್/2008**ನೇ ಸಂಖ್ಯೆಯ ಅಧಿಸೂಚನೆ.

2. 1988ರ ಕರ್ನಾಟಕ ಲೋಕಾಯುಕ್ತ (ಅಧಿಕಾರಿಗಳು ಮತ್ತು ನೌಕರರ ವ್ಯಂದ, ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ ಎರಡನೇ ಅನುಸೂಚಿಗೆ ತಿದ್ದುಪಡಿ ಮಾಡಿ **ದಿನಾಂಕ 08.06.2007**ರಂದು ಹೊರಡಿಸಲಾದ ಅಧಿಸೂಚನೆ ಸಂಖ್ಯೆ **ಡಿಪಿಎಆರ್/92/ಎಸ್‌ಎಲ್‌ಯು/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುವುದು.

3. 1993ರ ಕರ್ನಾಟಕ ಆಡಳಿತ ನ್ಯಾಯ ಮಂಡಳಿ(ನೇಮಕಾತಿ) ನಿಯಮಗಳ ಅನುಸೂಚಿಗೆ ತಿದ್ದುಪಡಿ ಮಾಡಿ **ದಿನಾಂಕ 25.11.2006**ರಂದು ಹೊರಡಿಸಲಾದ **ಡಿಪಿಎಆರ್/06/ಎಸ್‌ಎಟಿ/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

II. ಶ್ರೀ ಗೋವಿಂದ ಎಂ ಕಾರಜೋಳ,(ಯೋಜನೆ ಮತ್ತು ಸಾಂಖ್ಯಿಕ) ಸಚಿವರು:

ಮಾನ್ಯ ಅಧ್ಯಕ್ಷರೆ,

1969ರ ಜನನಗಳ ಮತ್ತು ಮರಣಗಳ ನೋಂದಣಿ ಅಧಿನಿಯಮ 30(3)ರ ಪ್ರಕರಣದ ಮೇರೆಗೆ:

1. 1969ರ ಕೇಂದ್ರೀಯ ಜನನಗಳ ಮತ್ತು ಮರಣಗಳ ನೋಂದಣಿ ಅಧಿನಿಯಮದ ಕಲಂ 30ರ 1999ರ ರೀತ್ಯಾ ಕರ್ನಾಟಕ ಜನನಗಳ ಮತ್ತು ಮರಣಗಳ ನೋಂದಣಿ ನಿಯಮಗಳನ್ನು ದಿನಾಂಕ 01.01.2000ರಿಂದ ಜಾರಿಗೆ ಬರುವಂತೆ ರಚಿಸಿ **ದಿನಾಂಕ 30.12.1999**ರಂದು ಹೊರಡಿಸಲಾದ **ಪಿಡಿಎಸ್/208/ಎಸ್ಎಂಸಿ/1999**ನೇ ಸಂಖ್ಯೆಯ ಅಧಿಸೂಚನೆ.

2. 199ರ ಕರ್ನಾಟಕ ಜನನಗಳ ಮತ್ತು ಮರಣಗಳ ನೋಂದಣಿ ನಿಯಮಗಳಿಗೆ ತಿದ್ದುಪಡಿ ಹಾಗೂ ನಮೂನೆ–1 2,5,6.7 ಹಾಗೂ 8ಗಳನ್ನು ಬದಲಾಯಿಸಿ **ದಿನಾಂಕ 30.12.2006**ರಂದು ಹೊರಡಿಸಲಾದ **ಪಿಡಿಎಸ್/135/ಎಸ್ಎಂಸಿ/2006**ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

III. ಶ್ರೀ ಕೆ.ಎಸ್. ಈಶ್ವರಪ್ಪ, (ಇಂಧನ) ಸಚಿವರು: ಮಾನ್ಯ ಅಧ್ಯಕ್ಷರೆ,

1999ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣೆ ಅಧಿನಿಯಮದ ಕಲಂ 57(3) ಮೇರೆಗೆ:

1. 1999ರ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಅಧ್ಯಕ್ಷರು ಮತ್ತು ಸದಸ್ಯರುಗಳ ನೇಮಕಾತಿ) ನಿಯಮಗಳ ನಿಯಮ 4ಕ್ಕೆ ತಿದ್ದುಪಡಿ ಹಾಗೂ ಹೊಸ ನಮೂನೆಯನ್ನು ನಿಗದಿಪಡಿಸಿ **ದಿನಾಂಕ 25.10.2002**ರಂದು ಹೊರಡಿಸಲಾದ **ಡಿಇ/46/ಪಿಎಸ್ಆರ್/2001**ನೇ ಸಂಖ್ಯೆಯ ಅಧಿಸೂಚನೆ.

2. 2002ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ವರ್ಗಾವಣೆ ವ್ಯವಸ್ಥೆ) (ತಿದ್ದುಪಡಿ) ನಿಯಮಗಳ ಅನುಸೂಚಿ –ಎ ಗೆ ತಿದ್ದುಪಡಿ ಮಾಡಿ **ದಿನಾಂಕ 02.12.2002**ರಂದು ಹೊರಡಿಸಲಾದ **ಡಿಇ/51/ಪಿಎಸ್ಆರ್/2001**ನೇ ಸಂಖ್ಯೆಯ ಅಧಿಸೂಚನೆ.

3. 2002ರ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣಾ (ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ನಿಯಮಿತದ (ಕ.ವಿ.ಪ್ರ.ನಿ.ನಿ) ಉದ್ಯಮಗಳು ಮತ್ತು ಅದರ ಸಿಬ್ಬಂದಿಯ, ವಿದ್ಯುಚ್ಛಕ್ತಿ ವಿತರಣೆ ಮತ್ತು ಚಿಲ್ಲರೆ ಸರಬರಾಜು ಕಂಪನಿಗಳಿಗೆ ವರ್ಗಾವಣೆ) (ತಿದ್ದುಪಡಿ) ನಿಯಮಗಳ ನಿಯಮ 2 ಹಾಗೂ 4ಕ್ಕೆ ತಿದ್ದುಪಡಿ ಮಾಡಿ **ದಿನಾಂಕ 31.01.2003**ರಂದು ಹೊರಡಿಸಲಾದ **ಡಿಇ/14/ಪಿಎಸ್ಆರ್/2002**ನೇ ಸಂಖ್ಯೆಯ ಅಧಿಸೂಚನೆ.